**AUGUST 02, 2024**

**AKASHAVANI - DHARWAD**

**PRADESH SAMACHARA (KANNADA) 7:05 AM**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ಹರ್ಷವರ್ಧನ ಶೀಲವಂತ**

<><><>

**ಮುಖ್ಯಾಂಶಗಳು**

<><><>

- ‘ಮಹಾಂತ ಚಟ ವಿಮುಕ್ತಿ ಜೋಳಿಗೆ’; ರಾಜ್ಯಾದ್ಯಂತ, ‘ವ್ಯಸನಮುಕ್ತಿ ಜನ ಜಾಗ್ರತಿ ದಿನಾಚರಣೆ’.
- ‘ಕೊರತೆಗಳನ್ನು ನೀಗಿಸಿ, ಸರ್ವರೂ ಸ್ತನಪಾನಕ್ಕೆ ಆದ್ಯತೆ ನೀಡೋಣ’ ಎಂಬ, ಧ್ಯೇಯದೊಂದಿಗೆ, ವಿಶ್ವ ಸ್ತನ್ಯಪಾನ ಸಪ್ತಾಹ.
- ಎನ್‌ಡಿಎ ಮಿತ್ರ ಪಕ್ಷಗಳಿಂದ, ಬೆಂಗಳೂರಿನಿಂದ ಮೈಸೂರಿನ ವರೆಗೆ, ನಾಳೆಯಿಂದ ಪಾದಯಾತ್ರೆ ಆರಂಭ.
- ‘ಮುಡಾ ನಿವೇಶನ ಹಂಚಿಕೆ’ ಪ್ರಕರಣ; ಮುಖ್ಯಮಂತ್ರಿಗೆ ನೀಡಲಾದ ನೋಟಿಸ್ ಹಿಂಪಡೆಯುವಂತೆ, ಸಚಿವರ ಪರಿ ’ತ್, ರಾಜ್ಯಪಾಲರಿಗೆ ಸಲಹೆ.

<><><>

**ಈಗ ವಾರ್ತೆಗಳ ವಿವರ**

<><><>

ಬಾಗಲಕೋಟೆ ಜಿಲ್ಲೆ, ಇಳಕಲ್ಲಿನ ಶ್ರೀ ವಿಜಯ ಮಹಾಂತೇಶ ಸಂಸ್ಥಾನ ಮಠದ ಡಾಕ್ಟರ್ ಮಹಾಂತ ಶಿವಯೋಗಿಗಳ ಜನ್ಮ ದಿನವಾದ ನಿನ್ನೆ, ರಾಜ್ಯ ಸರ್ಕಾರ ರಾಜ್ಯಾದ್ಯಂತ ವ್ಯಸನಮುಕ್ತಿ ದಿನಾಚರಣೆ ಆಯೋಜಿಸಿತ್ತು. ಯುವ ಜನತೆ ವ್ಯಸನಗಳಿಂದ ಮುಕ್ತರಾಗಲಿ ಎಂದು, ‘ಮಹಾಂತ ಚಟ ವಿಮುಕ್ತಿ ಜೋಳಿಗೆ’ ಯನ್ನು 1975ರಲ್ಲಿ ಆರಂಭಿಸಿದ, ಶ್ರೀ ಮಹಾಂತ ಶಿವಯೋಗಿಗಳು, ಸಾವಿರಾರು ಜನರನ್ನು ವ್ಯಸನಗಳಿಂದ ಮುಕ್ತರಾಗಿಸಿ, ಮಾದರಿಯಾದವರು.

<><><>

ರಾಜ್ಯದ ಎಲ್ಲ 31 ಜಿಲ್ಲೆಗಳಲ್ಲಿ, ವ್ಯಸನಮುಕ್ತಿ ದಿನಾಚರಣೆ ಹಾಗೂ ವಿಚಾರ ಸಂಕಿರಣಗಳು ಜರುಗಿದ ವರದಿಗಳು ಬಂದಿವೆ.

<><><>

ಕೊಪ್ಪಳ ಜಿಲ್ಲೆ, ಯಲಬುರ್ಗಾ ತಾಲೂಕಿನ ತಾಳಕೇರಿ ಗ್ರಾಮವನ್ನು ಮದ್ಯ ಮುಕ್ತ ಗ್ರಾಮವನ್ನಾಗಿಸಲು, ಠರಾವು ಮಾಡಲಾಗಿದೆ.

<><><>

ಮೈಸೂರು ಬಳಿಯ ಸರಗೂರಿನ, ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ಧಾರವಾಡ ಪ್ರಾದೇಶಿಕ ಕಚೇರಿಯ ಸಹಯೋಗದಲ್ಲಿ, ಧಾರವಾಡ ಮಾನಸಿಕ ಆರೋಗ್ಯ ಹಾಗೂ ನರ ವಿಜ್ಞಾನಗಳ ಸಂಸ್ಥೆ – 'ಡಿಮ್ಹಾನ್ಸ್'ನಲ್ಲಿ, ವ್ಯಸನಮುಕ್ತಿ ವಿಶೇಷ ಜನ ಜಾಗ್ರತಿ ಕಾರ್ಯಕ್ರಮ ಜರುಗಿತು. ಡಿಮ್ಹಾನ್ಸ್ ನಿರ್ದೇಶಕ, ಖ್ಯಾತ ಮನೋ ಆರೋಗ್ಯ ತಜ್ಞ ವೈದ್ಯ, ಸಿ.ಅರುಣಕುಮಾರ್, ಪ್ರದೇಶ ಸಮಾಚಾರಕ್ಕಾಗಿ, ತಮ್ಮ ಅಭಿಪ್ರಾಯ ಹಂಚಿಕೊಂಡಿದ್ದಾರೆ.

<><><>

ಡಾಕ್ಟರ್ ಸಿ.ಅರುಣಕುಮಾರ್ ಧ್ವನಿ 39 ಸೆಕೆಂಡುಗಳು

<><><>

ವಿಶ್ವ ಸ್ತನ್ಯಪಾನ ಸಪ್ತಾಹ ಈ ತಿಂಗಳ ಮೊದಲ ವಾರ ದೇಶಾದ್ಯಂತ ನಡೆಯಲಿದೆ. 'ಕೊರತೆಗಳನ್ನು ಕೊನೆಗೊಳಿಸಿ; ಸರ್ವರೂ ಸ್ತನ್ಯಪಾನಕ್ಕೆ ಬೆಂಬಲ ನೀಡೋಣ' ಎಂಬುದು, ಪ್ರಸಕ್ತ ಸಾಲಿನ ಧ್ಯೇಯವಾಗಿದೆ. ವಿಶ್ವ ಆರೋಗ್ಯ ಸಂಸ್ಥೆ ಹಾಗೂ ಯೂನಿಸೆಫ್, ಕೇಂದ್ರ ಮತ್ತು ರಾಜ್ಯದ ಆರೋಗ್ಯ ಸಚಿವಾಲಯ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಹಯೋಗದಲ್ಲಿ, ಸಮುದಾಯದ ಸಹಭಾಗಿತ್ವ ಮತ್ತು ನಾಗರಿಕ ಸಮಾಜದ ಪಾಲುಗಾರಿಕೆಯನ್ನು ಅಪೇಕ್ಷಿಸಲಾಗಿದೆ.

<><><>

ಹುಟ್ಟಿದ ಮಗುವಿಗೆ ತಾಯಿಯ ಎದೆಹಾಲಿಗಿಂತ ಪೌಷ್ಟಿಕವಾದ ಪರ್ಯಾಯ ಆಹಾರ ಮತ್ತೊಂದಿಲ್ಲ; ಮಗುವಿನ ಆರೋಗ್ಯಕರ ಬೆಳವಣಿಗೆಗೆ, ತಾಯಿಯ ಎದೆ ಹಾಲು ತಪ್ಪದೇ ಸಿಗಲಿ ಎಂದು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಖಾತೆ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದ್ದಾರೆ. ಎದೆ ಹಾಲುಣಿಸುವ ಆಗಸ್ಟ್ ತಿಂಗಳ ಪ್ರಥಮ ವಾರದಲ್ಲಿ, ತಾಯಿಯ ಎದೆ ಹಾಲಿನ ಮಹತ್ವ ಎಲ್ಲೆಡೆ ಸಾರೋಣ ಎಂದು, ಸಾಮಾಜಿಕ ಜಾಲತಾಣ ಎಕ್ಸ್ ಮೂಲಕ, ಮನವಿ ಮಾಡಿದ್ದಾರೆ.

<><><>

ಮಹಾದಾಯಿ ಹಾಗೂ ಕೃ ್ಣ ನದಿ ಯೋಜನೆ ಸಮರ್ಪಕ ಜಾರಿ, ರೈತರ ಸಂಪೂರ್ಣ ಕೃಷಿ ಸಾಲ ಮನ್ನಾ ಸೇರಿದಂತೆ, ವಿವಿಧ ಪ್ರಮುಖ 4 ಬೇಡಿಕೆಗಳನ್ನು ಈಡೇರಿಸಲು ಆಗ್ರಹಿಸಿ, ಇದೇ 29ರಂದು ನರಗುಂದದಲ್ಲಿ ಬೃಹತ್ ರೈತ ಸಮಾವೇಶ ನಡೆಯಲಿದೆ ಎಂದು ರಾಜ್ಯ ರೈತ ಸಂಘಟನೆಗಳ ಒಕ್ಕೂಟದ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್ ಹುಬ್ಬಳ್ಳಿಯಲ್ಲಿ ತಿಳಿಸಿದ್ದಾರೆ.

<><><>

ಪರಿಶಿ ್ಟರಲ್ಲಿ ಅತಿ ಹಿಂದುಳಿದವರನ್ನು ಗುರುತಿಸಿ, ಒಳಮೀಸಲಾತಿ ನೀಡುವ ರಾಜ್ಯ ಸರ್ಕಾರಗಳ ಅಧಿಕಾರವನ್ನು ಎತ್ತಿ ಹಿಡಿದು, ಸರ್ವೋಚ್ಚ ನ್ಯಾಯಾಲಯ ನೀಡಿದ ತೀರ್ಪು ಐತಿಹಾಸಿಕವಾದ್ದು, ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ. ಎ.ಜೆ.ಸದಾಶಿವ ಆಯೋಗದ ಶಿಫಾರಸುಗಳನ್ನು ಕೂಲಂಕ ವಾಗಿ ಅಧ್ಯಯನ ನಡೆಸಿ, ಸಮಾಲೋಚನೆ ಮತ್ತು ಸಂಧಾನದ ಮೂಲಕ, ಒಳಮೀಸಲಾತಿ ಬಗ್ಗೆ ಸ್ಪ ್ಟ ನಿರ್ಧಾರವನ್ನು ರಾಜ್ಯ ಸರ್ಕಾರ ಕೈಗೊಳ್ಳಲಿದೆ ಎಂದು ಮುಖ್ಯಮಂತ್ರಿ ತಿಳಿಸಿದ್ದಾರೆ. ತೀರ್ಪಿನಲ್ಲಿರುವ ವಿವಾದಾತ್ಮಕ ಕೆನೆಪದರದ ಬಗೆಗಿನ ಅಂಶವೂ ಸೇರಿದಂತೆ, ಪರಿಶಿ ್ಟ ಜಾತಿಯ ನಾಯಕರು ಮತ್ತು ಕಾನೂನು ತಜ್ಞರ ಜೊತೆ ಸಮಾಲೋಚಿಸಿ, ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಸಾಮಾಜಿಕ ಜಾಲತಾಣ ಎಕ್ಸ್ ನಲ್ಲಿ ಪ್ರಕಟಿಸಿದ್ದಾರೆ.

<><><>

ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ನೇತೃತ್ವದ, 7 ನ್ಯಾಯಮೂರ್ತಿಗಳ ಸಾಂವಿಧಾನಿಕ ಪೀಠ, ಈ ಮಹತ್ವದ ತೀರ್ಪು ನೀಡಿದೆ. ನ್ಯಾಯಪೀಠದಲ್ಲಿದ್ದ 6 ಜನ ಒಮ್ಮತದ ತೀರ್ಪು ನೀಡಿದರೆ, ಓರ್ವ ನ್ಯಾಯಮೂರ್ತಿ ಭಿನ್ನ ನಿಲುವು ತಳೆದಿದ್ದಾರೆ.

<><><>

ಚಿತ್ರದುರ್ಗ ಸಂಸದ ಗೋವಿಂದ ಕಾರಜೋಳ ಪ್ರತಿಕ್ರಿಯಿಸಿ, ಶೀಘ್ರವೇ ರಾಜ್ಯದಲ್ಲಿ ಒಳಮೀಸಲಾತಿ ಜಾರಿಗೆ ತರುವಂತೆ ಮುಖ್ಯಮಂತ್ರಿ ಅವರನ್ನು ಒತ್ತಾಯಿಸಿದ್ದಾರೆ.

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ರಾಷ್ಟ್ರೀಯ ಸ್ವಯಂಸೇವಕ ಸಂಘದ, ಸರಸಂಘಚಾಲಕರಾದ, ಡಾಕ್ಟರ್ ಮೋಹನ ಭಾಗವತ ಅವರು, ಬೆಳಗಾವಿಯ ಅಕಾದೆಮಿ ಆಫ್ ಕಂಪ್ಯಾರೆಟಿವ್ ಫಿಲಾಸಫಿ ಆಂಡ್ ರಿಲಿಜನ ಶತಮಾನೋತ್ಸವ ಸಮಾರಂಭಕ್ಕೆ ಚಾಲನೆ ನೀಡಿದರು. ಪದ್ಮಭೂಷಣ ಕಮಲೇಶ ಪಟೇಲ – ದಾಜಿ, ಹೈದರಾಬಾದ ರಾಮಚಂದ್ರ ಮಿಷನ್‌ನ ಕನ್ಹಾ ಶಾಂತಿವನಂ ಅವರ ಉಪಸ್ಥಿತಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ, ಸಂಸ್ಥಾಪಕ ಗುರುದೇವ ಡಾಕ್ಟರ್ ಆರ್.ಡಿ. ರಾನಡೇ ಅವರ ಅನುಯಾಯಿಗಳು ಉಪಸ್ಥಿತರಿದ್ದರು.

<><><>

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ನಿವೇಶನ ಹಂಚಿಕೆ ಹಾಗೂ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ, ಹಣ ಅಕ್ರಮ ವರ್ಗಾವಣೆ ಹಗರಣಗಳ ಹಿನ್ನೆಲೆ, ಬೆಂಗಳೂರಿನಿಂದ ಮೈಸೂರಿಗೆ ಪಾದಯಾತ್ರೆ ನಡೆಸುವ ಕುರಿತಂತೆ, ದಿಲ್ಲಿಯಲ್ಲಿ ಎನ್.ಡಿ.ಎ. ಮಿತ್ರಕೂಟದ ನಾಯಕರ ಮಹತ್ವದ ಸಭೆ ನಡೆಯಿತು. ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಮಾತನಾಡಿ, ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರು ಪಾದಯಾತ್ರೆಯಲ್ಲಿ ಪಾಲ್ಗೊಳ್ಳಲಿದ್ದಾರೆ. ನಾಳೆ ಬೆಳಿಗ್ಗೆ 8.30ಕ್ಕೆ ನೈಸ್ ರಸ್ತೆಯ ಜಂಕ್ಷನ್‌ನಿಂದ ಪಾದಯಾತ್ರೆ ಆರಂಭವಾಗಲಿದೆ ಎಂದರು.

<><><>

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, 'ಮುಡಾ ನಿವೇಶನ ಹಂಚಿಕೆ' ಪ್ರಕರಣದಲ್ಲಿ, ಅಭಿಯೋಜನೆಗೆ ಪೂರ್ವಾನುಮತಿ ಕೋರಿ ಸಲ್ಲಿಸಿದ ಅರ್ಜಿಯನ್ನು, ತಿರಸ್ಕರಿಸಬೇಕು ಮತ್ತು ಮುಖ್ಯಮಂತ್ರಿ ಅವರಿಗೆ ನೀಡಲಾಗಿರುವ ಶೋಕಾಸ್ ನೋಟಿಸ್ ಅನ್ನು ಹಿಂಪಡೆಯಬೇಕು ಎಂದು, ರಾಜ್ಯ ಸಚಿವರ ಪರಿಷತ್ ಸಭೆ ರಾಜ್ಯಪಾಲರಿಗೆ ಸಲಹೆ ನೀಡಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅನುಪಸ್ಥಿತಿಯಲ್ಲಿ, ಸಚಿವರ ಪರಿಷತ್ ಸಭೆ ನಡೆಸಲು ನಾಮನಿರ್ದೇಶನಗೊಂಡಿದ್ದ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅಧ್ಯಕ್ಷತೆಯಲ್ಲಿ, ಮಹತ್ವದ ಸಭೆ ಬೆಂಗಳೂರಿನಲ್ಲಿ ನಡೆಯಿತು.

<><><>

ಇಂದು ಬೆಳಗ್ಗೆ 11 ಗಂಟೆಗೆ ಬಿಡದಿಯಲ್ಲಿ ಪ್ರಥಮ ಸಭೆ ನಡೆಯಲಿದ್ದು, ಬಿಜೆಪಿ–ಜೆಡಿಎಸ್ ನವರಿಗೆ, ಪ್ರಶ್ನೆ ಕೇಳುವ ಅಭಿಯಾನ ಆಯೋಜಿಸುವುದಾಗಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ, ಸದಾಶಿವನಗರದ ತಮ್ಮ ಗೃಹ ಕಚೇರಿಯಲ್ಲಿ ನಡೆದ, ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

<><><>

ಜುಲೈ ತಿಂಗಳಲ್ಲಿ ದೇಶಾದ್ಯಂತ, ವಾಡಿಕೆಗಿಂತ ಶೇಕಡ 9ರಷ್ಟು ಹೆಚ್ಚು ಮಳೆಯಾಗಿದೆ ಎಂದು, ಭಾರತೀಯ ಹವಾಮಾನ ಇಲಾಖೆಯ ಮುಖ್ಯಸ್ಥ ಮೃತ್ಯುಂಜಯ ಮಹಾಪಾತ್ರ, ಹೊಸ ದಿಲ್ಲಿಯಲ್ಲಿ ತಿಳಿಸಿದ್ದಾರೆ.

<><><>

ಸತತ ಮಳೆ ಹಿನ್ನೆಲೆ, ರಾಜ್ಯಾದ್ಯಂತ ಎಲ್ಲ ನದಿಗಳು ಮೈದುಂಬಿ ಹರಿಯುತ್ತಿವೆ. ಪ್ರವಾಹದ ಹಿನ್ನೆಲೆ, ಉಭಯವಾಸಿ ಜೀವಿಗಳು, ತಮ್ಮ ಮೂಲ ಇರುನೆಲೆ ಬಿಟ್ಟು, ಪಕ್ಕದ ಹೊಲ, ಗದ್ದೆ ಹಾಗೂ ನಡುಗಡ್ಡೆಗಳಲ್ಲಿ ತಾತ್ಕಾಲಿಕ ಆಶ್ರಯ ಪಡೆದಿವೆ.

ನದಿ ಪಾತ್ರದ ಜನ, ಅವುಗಳಿಂದ ಸುರಕ್ಷಿತ ಅಂತರ ಕಾಯ್ದುಕೊಂಡು, ಜನವಸತಿ ಪ್ರದೇಶಗಳಿಗೆ ಜಲಚರಗಳು ನುಗ್ಗದಂತೆ, ಮುನ್ನೆಚ್ಚರಿಕೆ ವಹಿಸಲು, ವಿಜಯನಗರ ಜಿಲ್ಲೆ ಹೊಸಪೇಟೆಯ, ವನ್ಯಜೀವಿ ಸಂಶೋಧಕ ಡಾಕ್ಟರ್ ಅಬ್ದುಲ್ ಸಮದ್ ಕೊಟ್ಟೂರು, ಪ್ರದೇಶ ಸಮಾಚಾರದ ಮೂಲಕ, ಮನವಿ ಮಾಡಿದ್ದಾರೆ.

<><><>

ಡಾ.ಅಬ್ದುಲ್ ಸಮದ್ ಕೊಟ್ಟೂರು ಧ್ವನಿ 50 ಸೆಕೆಂದುಗಳು

<><><>

ಪಶ್ಚಿಮಘಟ್ಟ ಪ್ರದೇಶ, ರಾಜ್ಯದ ಕರಾವಳಿ ಹಾಗೂ ಉತ್ತರ ಒಳನಾಡು ಜಿಲ್ಲೆಗಳಲ್ಲಿ, ಇಂದು ಭಾರಿ ಮಳೆಯಾಗುವ ಸಾಧ್ಯತೆಯಿದೆ ಎಂದು, ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಸೂಕ್ತ ಮುನ್ನೆಚ್ಚರಿಕೆ ವಹಿಸುವಂತೆ, ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ ಕೋರಿದೆ.

<><><>

ರಾಜ್ಯದಲ್ಲಿ ಸೈಬರ್ ಅಪರಾಧಗಳನ್ನು ನಿಯಂತ್ರಿಸಲು, ಕರ್ನಾಟಕ ಸೈಬರ್ ಸುರಕ್ಷಾ ನೀತಿ 2024ನ್ನು, ಮಾಹಿತಿ ತಂತ್ರಜ್ಞಾನ ಖಾತೆ ಸಚಿವ ಪ್ರಿಯಾಂಕ್ ಖರ್ಗೆ, ಬೆಂಗಳೂರಿನಲ್ಲಿ ಬಿಡುಗಡೆ ಮಾಡಿದರು. ರಾಜ್ಯದ ಡಿಜಿಟಲ್ ಮೂಲ ಸೌಕರ್ಯದ ರಕ್ಷಣೆ, ಜನ ಜಾಗೃತಿ, ಕೌಶಲಾಭಿವೃದ್ಧಿ, ಸಾರ್ವಜನಿಕ ಹಾಗೂ ಖಾಸಗಿ ಸಹಭಾಗಿತ್ವ ಮತ್ತು ತಂತ್ರಜ್ಞಾನ ಏಕೀಕರಣ ಸಾಧಿಸಲು, ನೂತನ ಸೈಬರ್ ಸುರಕ್ಷಾ ನೀತಿ ಜಾರಿಗೊಳಿಸಲಾಗಿದೆ ಎಂದರು.

<><><>

ಇಂದು, ರಾಷ್ಟ್ರೀಯ ರಸಾಯನಶಾಸ್ತ್ರ ದಿನ. ಭಾರತದ ರಸಾಯನಶಾಸ್ತ್ರ ಪಿತಾಮಹ, ಆಚಾರ್ಯ ಪ್ರಫುಲ್ಲಚಂದ್ರ ರೇ ಅವರ ಜನ್ಮ ದಿನವನ್ನು ರಾಷ್ಟ್ರೀಯ ರಸಾಯನಶಾಸ್ತ್ರ ದಿನವನ್ನಾಗಿ ಆಚರಿಸಲಾಗುತ್ತದೆ. ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಅಂತಾರಾಷ್ಟ್ರೀಯ ಖ್ಯಾತಿಯ ರಸಾಯನ ಶಾಸ್ತ್ರಜ್ಞ ಪ್ರೊಫೆಸರ್ ಎಸ್.ಟಿ.ನಂದಿಬೇವೂರ ವಿಶೇಷ ಉಪನ್ಯಾಸ ನೀಡಲಿದ್ದಾರೆ.

<><><>

ಬೆಳಗಾವಿ ಜಿಲ್ಲೆ ಅಥಣಿ ಹಾಗೂ ಗೋಕಾಕನಲ್ಲಿ ಕೇಂದ್ರೀಯ ವಿದ್ಯಾಲಯಗಳನ್ನು ಸ್ಥಾಪಿಸುವಂತೆ, ಸಂಸದೆ ಪ್ರಿಯಾಂಕಾ ಜಾರಕಿಹೊಳಿ ಲೋಕಸಭೆಯಲ್ಲಿ ಮನವಿ ಮಾಡಿದ್ದಾರೆ.

<><><>

ಶಿರಾಡಿ ಘಾಟ್‌ನಲ್ಲಿ ಸುರಂಗ ರಸ್ತೆ ನಿರ್ಮಿಸಲು, ತ್ವರಿತ ಕ್ರಮ ಕೈಗೊಳ್ಳುವಂತೆ ಬಿಜೆಪಿ ಸಂಸದ ನಾರಾಯಣ ಕೊರಗಪ್ಪ, ರಾಜ್ಯಸಭೆಯಲ್ಲಿ ಮನವಿ ಮಾಡಿದ್ದಾರೆ.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ಸ್ವಾತಂತ್ರ್ಯ ಹೋರಾಟಗಾರ ಪಿಂಗಳಿ ವೆಂಕಯ್ಯ ಅವರ ಜಯಂತಿ ಇಂದು. ಅವರು ಭಾರತದ ರಾಷ್ಟ್ರ ಧ್ವಜದ ಪ್ರಥಮ ವಿನ್ಯಾಸಕರು. ಉಪನ್ಯಾಸಕ, ಲೇಖಕ, ಭೂವಿಜ್ಞಾನಿ, ಶಿಕ್ಷಣತಜ್ಞ, ಕೃಷಿಕ ಮತ್ತು ಬಹುಭಾ ಾವಾದಿಯೂ ಆಗಿದ್ದರು.

<><><>

ಪ್ಯಾರಿಸ್ ಒಲಿಂಪಿಕ್ಸ್: ಭಾರತದ ಶೂಟರ್ ಸ್ವಪ್ನಿಲ್ ಕುಸಾಳೆ ಕಂಚಿನ ಪದಕ ಗಳಿಸಿದ್ದಾರೆ. 50 ಮೀಟರ್ ರೈಫಲ್ ವಿಭಾಗದಲ್ಲಿ, ಸ್ವಪ್ನಿಲ್ 451 ದಶಾಂಶ 4 ಅಂಕಗಳನ್ನು ಪಡೆದಿದ್ದಾರೆ.

<><><>

ಆಕಾಶವಾಣಿ ಧಾರವಾಡದ ಕೇಂದ್ರದ ಕಾರ್ಯಕ್ರಮ ವಿಭಾಗದ ಮುಖ್ಯಸ್ಥರಾಗಿ, ಶರಣಬಸವ ಚೋಳಿನ ಅಧಿಕಾರ ವಹಿಸಿಕೊಂಡಿದ್ದಾರೆ.

<><><>

ಪ್ರವಾಹ ಅಧ್ಯಯನ ಆರಂಭಿಸಿರುವ, ವಿಪಕ್ಷ ಉಪ ನಾಯಕ ಅರವಿಂದ ಬೆಲ್ಲದ ನೇತೃತ್ವದ ತಂಡ, ಬಾಗಲಕೋಟೆ ಜಿಲ್ಲೆಯ ವಿವಿಧ ತಾಲೂಕುಗಳ, ಪ್ರವಾಹ ಪೀಡಿತ ಪ್ರದೇಶಗಳಿಗೆ ಭೇಟಿ ನೀಡಿತು.

<><><>

ಬೆಂಗಳೂರಿನ, ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ, ಎಸ್.ಎಸ್.ಎಲ್.ಸಿ. 3ನೇ ವಾರ್ಷಿಕ ಪರೀಕ್ಷೆಯನ್ನು, ಇಂದಿನಿಂದ 9ನೇ ತಾರೀಖಿನ ವರೆಗೆ, ನಡೆಸಲಿದೆ.

<><><>

ಉತ್ತರಕನ್ನಡ ಜಿಲ್ಲೆ, ಅಂಕೋಲಾ ತಾಲೂಕಿನ ಶಿರೂರು ಚತುಷ್ಪಥ ರಾಷ್ಟ್ರೀಯ ಹೆದ್ದಾರಿ 66ರಲ್ಲಿ ವಾಹನಗಳ ಸಂಚಾರಕ್ಕೆ ಜಿಲ್ಲಾಧಿಕಾರಿ ಕೆ.ಲಕ್ಷ್ಮೀಪ್ರಿಯಾ ಪರವಾನಗಿ ನೀಡಿದ್ದಾರೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ‘ಮಹಾಂತ ಚಟ ವಿಮುಕ್ತಿ ಜೋಳಿಗೆ’; ರಾಜ್ಯಾದ್ಯಂತ, ‘ವ್ಯಸನಮುಕ್ತ ಜನ ಜಾಗ್ರತಿ ದಿನಾಚರಣೆ’.
- ‘ಕೊರತೆಗಳನ್ನು ನೀಗಿಸಿ, ಸರ್ವರೂ ಸ್ತನಪಾನಕ್ಕೆ ಆದ್ಯತೆ ನೀಡೋಣ’ ಎಂಬ, ಧ್ಯೇಯದೊಂದಿಗೆ, ವಿಶ್ವ ಸ್ತನ್ಯಪಾನ ಸಪ್ತಾಹ.
- ಎನ್‌ಡಿಎ ಮಿತ್ರ ಪಕ್ಷಗಳಿಂದ, ಬೆಂಗಳೂರಿನಿಂದ ಮೈಸೂರಿನ ವರೆಗೆ, ನಾಳೆಯಿಂದ ಪಾದಯಾತ್ರೆ ಆರಂಭ.
- ‘ಮುಡಾ ನಿವೇಶನ ಹಂಚಿಕೆ’ ಪ್ರಕರಣ; ಮುಖ್ಯಮಂತ್ರಿಗೆ ನೀಡಲಾದ ನೋಟಿಸ್ ಹಿಂಪಡೆಯುವಂತೆ, ಸಚಿವರ ಪರಿ ‘ತ್, ರಾಜ್ಯಪಾಲರಿಗೆ ಸಲಹೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 9 ಗಂಟೆ 5 ನಿಮಿಷಕ್ಕೆ.

<><><>